ಸೇರಿಸಿಕೊಂಡಿಲ್ಲ. ಆದ್ದರಿಂದ ಬೆಂಗಳೂರು ನಗರದ ಕೊಳಚೆ ಪ್ರದೇಶಗಳಲ್ಲಿ ಯಾವುದೇ ರೀತಿಯ ಅನುದಾನ ಬಹಳ ಕಡಿಮೆ ಬರುತ್ತಿದೆ. ಪ್ರತಿಯೊಂದು ಸ್ಲಂಗೆ ಎರಡು ಲಕ್ಷ ರೂ ಎರಡೂವರೆ ಲಕ್ಷರೂ ಕೊಡತಕ್ಕಂತಹ ಕೆಲಸವಾಗುತ್ತಿದೆ. ಆದ್ದರಿಂದ ಬೆಂಗಳೂರು ನಗರದಲ್ಲಿರುವ ಕೊಳಚೆ ಪ್ರದೇಶಗಳಲ್ಲಿ ಕೂಡ ನಿರ್ಮಲ ಜ್ಯೋತಿಯಲ್ಲಿ ದೊಡ್ಡ ಲೋನ್ ತೆಗೆದುಕೊಂಡು ಮಾಡಬೇಕೆಂದಿದ್ದೀರಿ, ಇಲ್ಲಿಯೂ ಕೂಡ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಇದಕ್ಕೆ ಉತ್ತರ ಕೊಡಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್: ಸನ್ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ಬೆಂಗಳೂರು ನಗರ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿರುವುದರ ಜೊತೆಗೆ ಕೊಳಚೆ ಪ್ರದೇಶಗಳು ಹೆಚ್ಚಿಗೆ ಇರುವುದರಿಂದ ಬೆಂಗಳೂರು ನಗರದಲ್ಲಿರುವ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಸನ್ಮಾನ್ಯ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ವಿಶೇಷವಾದ ಕಾರ್ಯಕ್ರಮ ರೂಪಿಸಿದ್ದೇವೆ. ಈ ಬೆಂಗಳೂರು ನಗರದ ಕೊಳಚೆ ಪ್ರದೇಶಗಳನ್ನು ನಾವು ಅಭಿವೃದ್ಧಿ ಪಡಿಸುತ್ತೇವೆ. ಜೊತೆಗೆ ಕೊಳಚೆ ಪ್ರದೇಶಗಳಲ್ಲಿ, ಅನೇಕ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಮನೆ ಇಲ್ಲದವರನ್ನು ಗುರುತಿಸಿದ್ದೇವೆ. ಬೆಂಗಳೂರು ನಗರದ ಎಲ್ಲಾ ಕೊಳಚೆ ಪ್ರದೇಶಗಳಲ್ಲಿ 2,000 ಕ್ಕೂ ಮೇಲ್ಪಟ್ಟು ಮನೆಗಳನ್ನು ನಿರ್ಮಿಸುವ ಯೋಜನೆ ಬೆಂಗಳೂರು ನಗರಕ್ಕೆ ನಾವು ಹಮ್ಮಿಕೊಂಡಿದ್ದೇವೆ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಮುಗಿಯಿತು. ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿ ಶಾಸ್ತ್ರ): ಮಾನ್ಯ ಅಧ್ಯಕ್ಷರೆ, 12.3.03ರ ಲಿಖಿತ ಮೂಲಕ ಉತ್ತರಿಸುವ 153 ಪ್ರಶ್ನೆಗಳ ಪೈಕಿ 80 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು. ಅನುಬಂಧ - 1

3. ಗಮನ ಸೆಳೆಯುವ ಸೂಚನೆಗಳು

(ಅ) ವಿಷಯ: ಕಂದಾಯ ಇಲಾಖೆ ನೌಕರರ ಮುಷ್ಕರ

ಶ್ರೀ ಯು.ಆರ್. ಸಭಾಪತಿ (ಉಡುಪಿ): ಮಾನ್ಯ ಅಧ್ಯಕ್ಷರೆ, ಕಂದಾಯ ನಿರ್ದೇಶನಾಲಯ ರಚನೆ ಸೇರಿದಂತೆ ನಾಡ ಕಛೇರಿ ರದ್ದತಿ ಪುನರ್ ಪರಿಶೀಲಿಸಿ, ಇನ್ನಿತರ ವಿವಿಧ ಬೇಡಿಕೆಗಳ ಬಗ್ಗೆ ರಾಜ್ಯದಾದ್ಯಂತ ಕಂದಾಯ ಇಲಾಖೆ ನೌಕರರು ಫೆಬ್ರವರಿ 28ರಂದು ಕಪ್ಪು ಪಟ್ಟಿ ಧರಿಸಿ ಕಛೇರಿಗೆ ಆಗಮಿಸಿ ಹಾಜರಾತಿ ಪುಸ್ತಕಕ್ಕೆ ಸಹಿ ಹಾಕಿ, ಲೇಖನಿ ಸ್ಥಗಿತ ಗೊಳಿಸಿ ನಡೆಸಿದ ಮುಷ್ಕರದ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿರುವ ಬಗ್ಗೆ ಸದನಕ್ಕೆ ತಿಳಿಸುವಂತೆ ಹಾಗೂ ಕಂದಾಯ ನೌಕರರ ಬೇಡಿಕೆಗಳನ್ನು ಇಡೇರಿಸುವಂತೆ ಸರ್ಕಾರದ ನಿಲುವನ್ನು ಸದನಕ್ಕೆ ತಿಳಿಸುವಂತೆ ಸರ್ಕಾರದ ಗಮನ ಸೆಳೆಯುತ್ತೇನೆ.

+ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಸರ್ಕಾರವು ವಿಭಾಗಾಧಿಕಾರಿಗಳ ಹುದ್ದೆ ರದ್ದುಪಡಿಸಲು ತೀರ್ಮಾನಿಸಿರುತ್ತದೆ. ಇದಕ್ಕೆ ಪೂರಕವಾಗಿ ವಿಭಾಗಾಧಿಕಾರಿಗಳು ಚಲಾಯಿಸುತ್ತಿದ್ದ ಎಲ್ಲಾ ಮೇಲ್ಮನವಿ ಹಾಗೂ ಪುನರಾವಲೋಕನಾ ಪ್ರಕರಣಗಳನ್ನು ಕೆ.ಎ.ಟಿ.ಗೆ. ವರ್ಗಾಯಿಸಲು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಇನ್ನುಳಿದಂತೆ

ಶಿರಸ್ತೇದಾರ್ : ಉಪ ತಹಸೀಲ್ದಾರ್ ವೃಂದವನ್ನು ಜಿಲ್ಲಾ ವೃಂದವನ್ನಾಗಿ ಪರಿಗಣಿಸಲು ಪ್ರಸ್ತಾಪಿಸಲಾಗಿರುತ್ತದೆ. ಕರ್ನಾಟಕ ರಾಜ್ಯ ಸರ್ಕಾರಿ ಕಂದಾಯ ಇಲಾಖೆಯ ನೌಕರರ ಸಂಘವು ಮನವಿಯನ್ನು ಸಲ್ಲಿಸಿ, ವಿಭಾಗಾಧಿಕಾರಿಗಳ ಹುದ್ದೆ ಮುಂದುರೆಸಲು, ಅಥವಾ ಮುಂದುವರೆಸಲು ಸಾಧ್ಯವಿಲ್ಲದಿದ್ದಲ್ಲಿ ಕಂದಾಯ ಇಲಾಖೆಗೆ ನಿರ್ದೇಶನಾಲಯ: ಕಮಿಷನರೇಟ್ ರಚನೆ ಮಾಡಲು ಕೋರಿರುತ್ತಾರೆ. ಕಂದಾಯ ನಿರ್ದೇಶನಾಲಯ ಅಥವಾ ಕಮಿಷನರೇಟ್ ರಚನೆ ಮಾಡುವ ವಿಷಯದ ಬಗ್ಗೆ ಸರ್ಕಾರ ಇನ್ನೂ ಯಾವುದೇ ನಿರ್ಧಾರ ತೆಗೆದುಕೊಂಡಿರುವುದಿಲ್ಲ.

ನಾಡ ಕಛೇರಿಗಳ ರದ್ದತಿ ತೀರ್ಮಾನ ಪುನರ್ ಪರಿಶೀಲಿಸಿ ಬಾಕಿ ಇರುವ 248 ನಾಡ ಕಛೇರಿಗಳನ್ನು ತೆರೆಯುವುದು ಹಾಗೂ ನಾಡ ಕಛೇರಿ ಉಪ ತಹಸೀಲ್ದಾರ್ ಹುದ್ದೆಗಳನ್ನು ಗ್ರೇಡ್-2 ಹುದ್ದೆಗೆ ಏರಿಸಿ ಪೂರ್ಣ ಅಧಿಕಾರ ಪ್ರತ್ಯಾಯೋಜಿಸುವ ಬೇಡಿಕೆ ಇರುತ್ತದೆ. ರಾಜ್ಯದಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ಒಟ್ಟು 328 ನಾಡ ಕಛೇರಿಗಳನ್ನು ರದ್ದು ಪಡಿಸಲು ಆಡಳಿತ ಸುಧಾರಣ ಆಯೋಗ ಶಿಫಾರಸ್ಸು ಮಾಡಿದೆ. ಈ ಶಿಫಾರಸ್ಸನ್ನು ಮಾಡುವ ಮೊದಲು ಕಂದಾಯ ಇಲಾಖೆಯ ನೌಕರರ ಸೇವಾ ಹಿತಾಸಕ್ತಿಗೆ ಯಾವುದೇ ಧಕ್ಕೆ ಬಾರದ ಷರತ್ತಿಗೆ ಒಳಪಟ್ಟು ನಾಡ ಕಛೇರಿಗಳನ್ನು ರದ್ದುಪಡಿಸಲು ಇಲಾಖೆಯ ನೌಕರರ ಸಂಘದ ಪದಾಧಿಕಾರಿಗಳು ಒಪ್ಪಿಗೆ ನೀಡಿರುವುದಾಗಿ ಆಯೋಗ ತನ್ನ ವರದಿಯಲ್ಲಿ ತಿಳಿಸಿದೆ. ರಾಜ್ಯದಲ್ಲಿರುವ ಹೋಬಳಿ ಕಂದಾಯ ನಿರೀಕ್ಷಕರ ಹುದ್ದೆಗಳನ್ನು ಶಿರಸ್ತೇದಾರರ ಹುದ್ದೆಗೆ ಮೇಲ್ದರ್ಜೆಗೆ ಏರಿಸಲು ಸಹ ಆಯೋಗವು ಶಿಫಾರಸ್ಸು ಮಾಡಿದೆ. ಕಂದಾಯ ನಿರೀಕ್ಷಕರ ಹುದ್ದೆಗಳನ್ನು ಶಿರಸ್ತೇದಾರರ ಹುದ್ದೆಗೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸುತ್ತಿದೆ.

ಆಹಾರ ಇಲಾಖೆ ವೃಂದ ಮತ್ತು ನೇಮಕಾತಿ ತಿದ್ದುಪಡಿ ನಿಯಮಗಳಂತೆ ಕಂದಾಯ ಇಲಾಖೆಗೆ ಮೀಸಲಿರುವ ಕೋಟಾ ನಿಯಮದಂತೆ ನೇಮಕಾತಿ ಆದೇಶ ಅನುಷ್ಠಾನಗೊಳಿಸುವುದು ಹಾಗೂ ಆಹಾರ ಇಲಾಖೆ ನೌಕರರನ್ನು ಕಂದಾಯ ಇಲಾಖೆಯಲ್ಲಿ ವಿಲೀನಗೊಳಿಸುವುದನ್ನು ಕೈಬಿಡುವ ಬೇಡಿಕೆ ಇರುತ್ತದೆ. ಕಂದಾಯ ಇಲಾಖೆಯ ನೌಕರರ ಬೇಡಿಕೆಯಂತೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಕಂದಾಯ ಇಲಾಖೆಯ ನೌಕರರಿಗೆ ನಿಯೋಜನೆ ಮೇಲೆ ಹೋಗಲು ಅವಕಾಶ ಕಲ್ಪಿಸಿ ಆಹಾರ ಮತ್ತು ನಾಗರೀಕ ಇಲಾಖೆ ಈಗಾಗಲೇ ಅಧಿಸೂಚನೆ ಹೊರಡಿಸಿದೆ.

ಅಭಿವೃದ್ಧಿ ಇಲಾಖೆ (ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿ) ಯಲ್ಲಿನ ಶೇಕಡ 50 ರಷ್ಟು ಹುದ್ದೆಗಳನ್ನು ಕಂದಾಯ ಸಿಬ್ಬಂದಿಗೆ ಕಾಯ್ದಿರಿಸುವ ಮನವಿ ಇರುತ್ತದೆ. ಜಿಲ್ಲಾ ಪಂಚಾಯತ್ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯತ್ ಸೆಕ್ರೆಟರೀಸ್ ಗ್ರೇಡ್-1 ಹುದ್ದೆಗಳನ್ನು ಕಂದಾಯ ಇಲಾಖೆಯ ನೌಕರರಿಗೆ ಆ ಇಲಾಖೆಯಲ್ಲಿ ಶೇಕಡಾ 50 ರಷ್ಟು ಹುದ್ದೆಗಳನ್ನು ಮೀಸಲಿಡಲು ಪ್ರಸ್ತುತ ಮಂಡಿಸಿರುವ ಬೇಡಿಕೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಲ್ಲಿಸುವ ಕುರಿತು ಪರಿಶೀಲಿಸಲಾಗುವುದು.

ಗ್ರಾಮ ಸಹಾಯಕ ಹುದ್ದೆಗಳನ್ನು ಖಾಯಂಗೊಳಿಸಿ 'ಡಿ' ದರ್ಜೆಗಳಾಗಿ ಪರಿವರ್ತಿಸುವ ವಿಷಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇದ್ದು, ಸರ್ಕಾರವು ದಾಖಲಿಸಿದ ಪುನರ್ ಪರಿಶೀಲನಾ ಅರ್ಜಿಯಲ್ಲಿ ಭಾರತ ಸರ್ವೋಚ್ಚ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೆ ಒಳಪಟ್ಟಿದೆ.

ತಹಸೀಲ್ದಾರ್ ಹುದ್ದೆಗಳಿಗೆ ನೇಮಿಸುತ್ತಿರುವ ಸಚಿವಾಲಯದ ಶಾಖಾಧಿಕಾರಿಗಳನ್ನು (ಕ್ಷೇತ್ರ ತರಬೇತಿ) ನಿಯೋಜನೆ ರದ್ದುಗೊಳಿಸಿ ಹಿಂತಿರುಗಿಸುವ ಬೇಡಿಕೆ ಇರುತ್ತದೆ. ವೃಂದ ಮತ್ತು ಅಧೀನ ಕಾರ್ಯದರ್ಶಿ ವೃಂದದ ಹಲವು ಅಧಿಕಾರಿಗಳನ್ನು ಕ್ಷೇತ್ರ ತರಬೇತಿ ಆಧಾರದ ಮೇಲೆ ತಹಸೀಲ್ದಾರರಾಗಿ ನಿಯೋಜಿಸಲಾಗಿದೆ.

ಕಂದಾಯ ಇಲಾಖೆಯಲ್ಲಿ 15 ವರ್ಷ ಸೇವೆ ಸಲ್ಲಿ ಎಲ್ಲಾ ಅರ್ಹ ಗ್ರೂಪ್-ಡಿ ದರ್ಜೆ ನೌಕರರನ್ನು ಮೇಲ್ದರ್ಜೆ ಹುದ್ದೆಗೆ ಏರಿಸುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಪರಿಶೀಲಿಸಲಾಗುತ್ತಿದೆ.

ತಹಸೀಲ್ದಾರ್ ಗ್ರೇಡ್-1 ಮತ್ತು ಗ್ರೇಡ್-2 ಹುದ್ದೆಗಳಲ್ಲಿರುವ ನಿಯಮ 12 ರಲ್ಲಿ ಮುಂದುವರೆಯುತ್ತಿರುವವರನ್ನು ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸಿ ಖಾಯಂಗೊಳಿಸುವುದು ಹಾಗೂ ತಹಸೀಲ್ದಾರ್ ಹುದ್ದೆಗೆ ಬಾಕಿ ಇರುವ ನೇರ ನೇಮಕಾತಿ ಹುದ್ದೆಗಳನ್ನು ಫ್ರೀಜ್ ಮಾಡುವ ಬೇಡಿಕೆ ಇರುತ್ತದೆ. ಕಂದಾಯ ಇಲಾಖೆಯ ಗ್ರೇಡ್-2 ತಹಸೀಲ್ದಾರ್ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಈಗಾಗಲೇ ಪ್ರಚಾರ ಪಡಿಸಿ ಸಲಹೆ ಹಾಗೂ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿರುತ್ತದೆ. ಇದಕ್ಕೆ ಪೂರಕವಾಗಿಸಿರುವ ಸಲಹೆ: ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ ಸೂಕ್ತ ಕ್ರಮ ಜರುಗಿಸಲಾಗುವುದು. ತದನಂತರ, ಗ್ರೇಡ್-1 ತಹಸೀಲ್ದಾರ್ ವೃಂದರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪರಿಗಣಿಸುವ ಬಗ್ಗೆ ಪರಿಶೀಲಿಸಲಾಗುವುದು.

ತಹಸೀಲ್ದಾರ್ ಗ್ರೇಡ್-2 ವೃಂದದ ಫ್ರೀಜ್ ಗೊಳಿಸುವ ವಿಷಯವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯೊಂದಿಗೆ ಸಮಾಲೋಚನೆ ನಡೆಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು. ನಂತರ ಕರ್ನಾಟಕ ನಾಗರೀಕ ಸೇವಾ ನಿಯಮ 32ರ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಹಸೀಲ್ದಾರ್ ಗ್ರೇಡ್-2 ವೃಂದದ ಅಧಿಕಾರಿಗಳನ್ನು ಖಾಯಗೊಳಿಸುವ ವಿಷಯವನ್ನು ಪರಿಶೀಲಿಸಲಾಗುವುದು.

ಶ್ರೀ ಯು.ಆರ್. ಸಭಾಪತಿ: ಈ ಬಗ್ಗೆ ಕಂದಾಯ ಇಲಾಖೆ ನೌಕರರ ಸಂಘದ ಪದಾಧಿಕಾರಿಗಳ ಜೊತೆ ಸರ್ಕಾರದವರು ಏನಾದರೂ ನೆಗೋಷಿಯೇಷನ್ ಮಾಡಿದ್ದಾರಾ? ಅವರೊದಿಗೆ ಚರ್ಚೆ ಮಾಡಿದ್ದಾರಾ ಎಂದು ತಮ್ಮ ಮೂಲಕ ಸಚಿವರಿಗೆ ಕೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ಕಂದಾಯ ಇಲಾಖೆಯ ನೌಕರರೊಂದಿಗೆ ಸಂಘದ ಪದಾಧಿಕಾರಿಗಳ ಜೊತೆ ಕಂದಾಯ ಇಲಾಖಾ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು 8.3.03ರಂದು ಮಾತುಕತೆ ನಡೆಸಿರುತ್ತಾರೆ.

ಅಧ್ಯಕ್ಷರು: ಮಾನ್ಯ ಡಿ.ವಿ. ಸದಾನಂದಗೌಡ, ಶ್ರೀ ಪ್ರಭಾಕರ ಬಂಗೇರ, ಶ್ರೀ ಯೋಗೀಶ್‌ಭಟ್ ಬೀಡಿ ಕಾರ್ಮಿಕರ ಬಗ್ಗೆ ಸರ್ಕಾರದ ಗಮನ ಸೆಳೆಯುವುದು.

(ಆ) ವಿಷಯ: ಬೀಡಿ ಕಾರ್ಮಿಕರು ಹೊರ ರಾಜ್ಯಗಳಿಗೆ ಸ್ಥಳಾಂತರಗೊಳ್ಳುತ್ತಿರುವುದು.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿರುವ ಬೀಡಿ ಕಾರ್ಮಿಕರು ಹೊರ ರಾಜ್ಯಗಳಿಗೆ ಸ್ಥಳಾಂತರ ಆಗುತ್ತಿರುವ ಬಗ್ಗೆ ಕಾರ್ಮಿಕ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು): ಸನ್ಮಾನ್ಯ ಅಧ್ಯಕ್ಷರೇ ಲಭ್ಯವಿರುವ ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿ ಸುಮಾರು 2,78,872 ಬೀಡಿ ಕಾರ್ಮಿಕರಿರುತ್ತಾರೆ.